ಅ.ದಾ. ನಂಃ 64-2012 ಪಿಡಬ್ಲೂಃ1

ಸಾಕ್ಷಿಯ ಹೆಸರುಃ | ವಿಠಾಬಾಯಿ ಹೀರಾ ಕಲ್ಗುಟಕರ

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 19-7-2016

(ಸಾಕ್ಷಿದಾರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಮರಾಠಿ ಮತ್ತು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀ ಎಸ್ ಆರ್ ಕೆ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ ಮಾಡಿಕೊಳ್ಳಲಾಯಿತು)

ಪಾಟೀ ಸವಾಲುಃ- ಶ್ರೀ ಪಿ ಎಮ್ ಎನ್ ವಕೀಲರಿಂದಃ-

ನಾನು 2 ನೇ ತರಗತಿಯವರೆಗೆ ಒದಿದ್ದೇನೆ. ನಾನು ಮರಾಠಿಯಲ್ಲಿ ಸಹಿ ಮಾಡುತ್ತೇನೆ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಾನು ಯಾವುದೇ ದಾಖಲೆಗೆ ಒದಿ ತಿಳಿದುಕೊಂಡು ಸಹಿ ಮಾಡುತ್ತೇನೆಂದರೆ ಸಾಕ್ಷಿ ನನಗೆ ಒದಲು ಬರುವುದಿಲ್ಲವೆಂದು ಉತ್ತರಿಸುತ್ತಾರೆ. ನಾನು ಯಾವುದೇ ಖಾಲಿ ಹಾಳೆಗಳ ಮೇಲೆ ಸಹಿ ಮಾಡುವುದಿಲ್ಲ, ನಾನು ಯಾವುದೇ ದಾಖಲೆಯಲ್ಲಿದ ವಿಷಯವನ್ನು ಬೇರೆಯವರಿಂದ ಒದಿಸಿ ತಿಳಿದುಕೊಂಡು ಸಹಿ ಮಾಡುತ್ತೇನೆಂದರೆ ಸಾಕ್ಷಿ ನನಗೆ ಆ ರೀತಿ ದಾಖಲೆಗಳನ್ನು ಒದಿಸುವ ಸಂದರ್ಭ ಬಂದಿಲ್ಲವೆಂದು ಉತ್ತರಿಸುತ್ತಾರೆ. ಸಾಕ್ಷಿಗೆ ತನ್ನ ವಾದ ಪತ್ರದಲ್ಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿ ತನ್ನದಲ್ಲವೆಂದು ಉತ್ತರಿಸುತ್ತಾರೆ. ಸದರಿ ದಾಖಲೆಯಲ್ಲಿ ಗಂಗಾಬಾಯಿ ಮದ್ಯದಲ್ಲಿ ಪಿ ಎಂದು ಬರೆದಿದೆ, ನಂತರ ಪಡವಳಕರ ಎಂದು ಬರೆದಿದೆ ಎಂದು ಉತ್ತರಿಸುತ್ತಾರೆ. ಗಂಗಾಬಾಯಿ ಪಡವಳಕರ ಎಂದರೆ ನಾನೇ ಎಂದರೆ ಸರಿ. ಸಾಕ್ಷಿಗೆ ತಾನು ಸಲ್ಲಿಸುವ ಮದ್ಯಂತರ ಅರ್ಜಿ ನಂ. 8 ರೊಟ್ಟಿಗೆ ಇರುವ ಪ್ರಮಾಣ ಪತ್ರದಲ್ಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿ ತನ್ನದು, ಆದರೆ ತಾನು ಮಾಡಿಲ್ಲವೆಂದು ಉತ್ತರಿಸುತ್ತಾರೆ. ದಾವೆ ಬರೆಯಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ವಾದ ಪತ್ರದಲ್ಲಿರುವ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿರುವ ಮದ್ಯಂತರ ಅರ್ಜಿ ನಂ. 8 ರ ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಎಂದರೆ ಸರಿಯಲ್ಲ, ಸಾಕ್ಷಿಗೆ ತನ್ನ ವಕಾಲತ್ತನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿ ತನ್ನ ಸಹಿ ಹಾಗೆ ಇಲ್ಲವೆಂದು ಉತ್ತರಿಸುತ್ತಾರೆ. ಸಾಕ್ಷಿಗೆ ಪ್ರತಿವಾದಿ ಇಂದು ಹಾಜರ ಪಡಿಸಿರುವ ದಾಖಲೆ ತೋರಿಸಿ ಅದರಲ್ಲಿರುವ ಸಹಿ ತನ್ನದು ಎಂದು ಸೂಚಿಸಲಾಗಿ ಸಾಕ್ಷಿ ತಾನು ಯಾವುದೇ ಸಹಿ ಮಾಡಿಲ್ಲವೆಂದು, ಮತ್ತು ಅದರಲ್ಲಿರುವ ಸಹಿ ತನ್ನದು ಅಲ್ಲ ಎಂದು ಉತ್ತರಿಸುತ್ತಾರೆ.

ಸರಸ್ವತಿ ಕಾಶಿನಾಥ ಗಜಿನಕರ ನನ್ನ 2 ನೇ ಸಹೋದರಿ. ನಾನು ಅವಳ ಸಹಿ ನೋಡಿಲ್ಲ, ಆದ್ದರಿಂದ ನನಗೆ ಅವಳ ಸಹಿ ಗುರುತಿಸಲಾಗುವುದಿಲ್ಲ, ನನ್ನ ತಾಯಿ ಸುಮಾರು 33

ವರ್ಷಗಳ ಹಿಂದೆ ಮೃತಪಟ್ಟಿದ್ದಾಳೆಂದರೆ ಸರಿ. ನನ್ನ ತಾಯಿ ವಿಲ್‌ನಾಮೆ ಬರೆದಂತೆ ಯಶೋಧಾ ಹೆಸರಿಗೆ ದಾಖಲೆಗಳಾದ ಬಗ್ಗೆ ನಮಗೆ ನೋಟಿಸ್ ಬಂದಿದ್ದವು ಎಂದರೆ ಸರಿಯಲ್ಲ. ನಂತರ ನಾನು ಮತ್ತು ನನ್ನ ಸಹೋದರಿ ಶಾನಬೋಗರ ಮುಂದೆ ವಿಲ್‌ನಾಮೆಯಂತೆ ಯಶೋಧಾ ಹೆಸರಿಗೆ ಜಮೀನನ್ನು ದಾಖಲ್ ಮಾಡಲು ತಕರಾರು ಇಲ್ಲವೆಂದು ಅರ್ಜಿ ಸಲ್ಲಿಸಿದ್ದೇವು ಎಂದರೆ ಸಾಕ್ಷಿ ತಾನು ಯಾವುದೇ ಅರ್ಜಿ ಸಲ್ಲಿಸಿಲ್ಲ. ತನ್ನ ಸಹೋದರಿ ಸಲ್ಲಿಸಿದ್ದಾಳೋ ಇಲ್ಲವೋ ಎಂದು ನನಗೆ ಗೊತ್ತಿಲ್ಲಾ ಎಂದು ಉತ್ತರಿಸುತ್ತಾರೆ. ನಾವು ಅರ್ಜಿ ನೀಡುವುದರಿಂದ ಯಶೋಧಾ ಹೆಸರಿಗೆ ಮ್ಯುಟೇಶನ್ ಎಂಟ್ರಿ ಆಗಿದೆ ಎಂದರೆ ಸಾಕ್ಷಿ ಯಶೋಧಾ ನನಗೆ ಆ ಬಗ್ಗೆ ಏನೂ ಹೇಳಿಲ್ಲವೆಂದು ಉತ್ತರಿಸುತ್ತಾರೆ. ಸಾಕ್ಷಿಗೆ ಪ್ರತಿವಾದಿ ಇಂದು ಹಾಜರ ಪಡಿಸಿರುವ ದಾಖಲೆ ತೋರಿಸಿ ಸದರಿ ದಾಖಲೆ ಶಾನಬೋಗರ ಮುಂದೆ ನೀಡಿದ ಅರ್ಜಿಯ ನಕಲು ಎಂದು ಸೂಚಿಸಲಾಗಿ ಸಾಕ್ಷಿ ಆ ಬಗ್ಗೆ ತನಗೆ ಏನೂ ಗೊತ್ತಿಲ್ಲವೆಂದು ಉತ್ತರಿಸುತ್ತಾರೆ. ನಾನು ಅದರ ಮೇಲೆ ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ನಾನು ಯಶೋದಾ ಹೆಸರಿಗೆ ಆಸ್ತಿ ದಾಖಲಾಗಲು 33 ವರ್ಷಗಳ ಹಿಂದೆ ಶಾನಭೋಗರ ಮುಂದೆ ಅರ್ಜಿ ಸಲ್ಲಿಸಿದ್ದರೂ ಸಹ ಈಗ ನನ್ನ ಮಕ್ಕಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಯಶೋಧಾ ತನ ತಾಯಿ ಒಟ್ಟಿಗೆ ವಾಸವಾಗಿದ್ದಳು ಎಂದರೆ ಸಾಕ್ಷಿ ಸ್ವಲ್ಪ ದಿವಸ ವಾಸವಾಗಿದ್ದಳು, ನಂತರ ನನ್ನ ತಾಯಿ ಮೃತಪಟ್ಟಿದ್ದಳು ಎಂದು ಉತ್ತರಿಸುತ್ತಾರೆ. ನನ್ನ ಅಕ್ಕ ಯಶೋಧಾ ತನ್ನ ತಾಯಿಗೆ ನೋಡಿಕೊಂಡಿದ್ದರಿಂದ ಮತ್ತು ತನ್ನ ಇಬ್ಬರು ಸಹೋದರಿಯರ ಮದುವೆ ಮಾಡಿಸಿದ್ದರಿಂದ ನನ್ನ ತಾಯಿ ಅವಳ ಹೆಸರಿಗೆ ಮೃತ್ಯು ಪತ್ರ ಬರೆಸಿದ್ದಳು ಎಂದರೆ ಸರಿಯಲ್ಲ. ವಿಲ್‌ನಾಮೆಯಂತೆ ಯಶೋಧೆಯ ಹೆಸರಿಗೆ ಆಸ್ತಿಗಳು ದಾಖಲ್ ಆದ ನಂತರ ದಾವಾ ಆಸ್ತಿ ನಂ. 1 ರಿಂದ 4 ಯಶೋಧೆ ಮತ್ತು ಅವಳ ಮಕ್ಕಳು ಕಬ್ಜಾ ವಹಿವಾಟು ಮಾಡಿಕೊಂಡು ಬಂದಿದ್ದಾಳೆಂದರೆ ಸರಿಯಲ್ಲ, ನಾವು ಸಹ ವಹಿವಾಟ್ ಮಾಡಿರುತ್ತೇವೆ.

ದಾವಾ ಆಸ್ತಿ ನಂ. 2 ರ 33 ಗುಂಟೆ 8 ಆಣೆ ಪೈಕಿ ಯಶೋಧೆ ಜೀವಂತವಿರುವಾಗಲೇ 20 ಗುಂಟೆ ಜಮೀನು ಬಿನ್‌ಶೇತ್ಕಿ ಮಾಡಿಕೊಂಡು ಅದರಲ್ಲಿ ಮನೆ ಕಟ್ಟಿಸಿಕೊಂಡಿದ್ದಾಳೆಂದರೆ ಸರಿ. ಸಾಕ್ಷಿ ಅವಳು ನಮಗೆ ಕೇಳದೇ ಮಾಡಿಕೊಂಡಿದ್ದಾಳೆಂದು ಉತ್ತರಿಸುತ್ತಾರೆ. ಯಶೋಧೆ ಮೃತಪಟ್ಟ ನಂತರ ಅವಳ ಮೂರು ಜನ ಗಂಡು ಮಕ್ಕಳು ಅಂದರೆ ಪ್ರತಿವಾದಿ ನಂ. 1 ರಿಂದ 3 ದಾವಾ ಆಸ್ತಿ 2 ರಲ್ಲಿ ಮೂರು ಮನೆಗಳನ್ನು ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ ನಂ. 1 ರಿಂದ 3 ರವರ ಮನೆಗಳು ಚೆಕ್‌ಪೋಸ್ಟ್ ಹತ್ತಿರ ಇವೆ ಎಂದರೆ ಸರಿ. ಸಾಕ್ಷಿ ಒಬ್ಬ ಸ್ವಲ್ಪ ಮೇಲ್ಗಡೆ ಕಟ್ಟಿದ್ದಾನೆ, ಇಬ್ಬರು ಕೆಳಗಡೆ ಕಟ್ಟಿಸಿದ್ದಾರೆಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ತನ್ನ ಮನೆಯಲ್ಲಿ ವಾಯು ಮಾಲಿನ್ಯ ತಪಾಸಣಾ ಕೇಂದ್ರ ನಡೆಸುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಅವರು 15-20 ವರ್ಷಗಳಿಂದ ಮನೆಕಟ್ಟಿಕೊಂಡು ವಾಸವಾಗಿದ್ದಾರೆಂದರೆ ನನಗೆ ನೆನಪಿಲ್ಲ. ಯಶೋದೆಗೆ ಮೃತ್ಯು ಪತ್ರದ ಮೂಲಕ ಬಂದ ಆಸ್ತಿಗಳು ನೀಡಿದ ನಂತರ ಉಳಿದ ಆಸ್ತಿಗಳು ನನ್ನ ಸಹೋದರನಾದ ರಾಮಾ ಕಲ್ಗುಟಕರನಿಗೆ ನೀಡಲಾಗಿತ್ತು ಎಂದರೆ ಸಾಕ್ಷಿ ಯಶೋಧೆಗೆ ನೀಡಿರುವ ಆಸ್ತಿಗಳ ಬಗ್ಗೆಯಾಗಲೀ ನನಗೆ ಗೊತ್ತಿಲ್ಲ, ರಾಮ ಕಲ್ಗುಟಕರ ಎನ್ನುವವರಿಗೆ ನೀಡಿರುವ ಬಗ್ಗೆಯೂಗಲೀ ನನಗೆ ಗೊತ್ತಿಲ್ಲವೆಂದು ಉತ್ತರಿಸುತ್ತಾರೆ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ನನ್ನ ಮಗಳ ಚಿತಾವಣೆಗೆ ಒಳಗಾಗಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆಂದರೆ ಸರಿಯಲ್ಲ. ತನ್ನ ಅಕ್ಕ ತೀರಿದ ನಂತರ ಅವಳ ಮಕ್ಕಳ ಹೆಸರಿಗೆ ಆಸ್ತಿ ಆದ ಬಗ್ಗೆ ನನಗೆ ಗೊತ್ತಿಲ್ಲ.

(ಶ್ರೀ ಆರ್ ಎಸ್ ಎಚ್ ಜಿ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೇಳಿರುವುದರಿಂದ ಸಮಯಾವಕಾಶ ನೀಡಲಾಯಿತು.)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ಜಡ್ಜ ಕಾರವಾರ